ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 16 ಇಎಸ್‌ಟಿ(5) 2022.

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-60001.
ದಿನಾಂಕ: 29.03.2022.

ಕಾಲ ವಿಳಂಬ ವಿನಾಯತಿ ಪ್ರಮಾಣ ಪತ್ರ

ವಿಷಯ: ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಆಯುಕ್ತಾಲಯ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೂರ್ಣ ಕಾಲಿಕ ಸಿಬ್ಬಂದಿಗಳ ಬಾಕಿ ವೇತನ ಪಾವತಿಸಲು ಕಾಲ ವಿಳಂಬ ವಿನಾಯತಿ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 01 ಟಿಎಫ್ ಪಿ 2021 ದಿ: 12.02.2022.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 46 ಹೆಚ್ ಪಿ ಟಿ 2022 ದಿ:22.03.2022.
3. ಸರ್ಕಾರದ ಪತ್ರ ಸಂಖ್ಯೆ: ಆಇ 250 ವೆಚ್ಚ-8 2022, ಇಡಿ 46 ಹೆಚ್ ಪಿ ಟಿ 2022 ದಿ: 29.03.2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರಲ್ಲಿ ವಿವಿಧ ಇಲಾಖೆಗಳಿಂದ ಬಾಕಿ ವೇತನಗಳಿಗೆ ಸಂಬಂಧಪಟ್ಟ ಪ್ರಸ್ತಾವನೆಗಳನ್ನು ಪರಿಶೀಲಿಸಿ ಆರ್ಥಿಕ ಇಲಾಖೆಯಿಂದ ಹೊರಡಿಸಲಾಗಿರುವ ಪುನರ್ ವಿನಿಯೋಗ ಅಥವಾ ಹೆಚ್ಚುವರಿ ಅನುದಾನಗಳನ್ನು ಹೊರಡಿಸಲಾಗಿರುತ್ತದೆ, ಇಂತಹ ಆದೇಶಗಳ ಮೇಲೆ ತಯಾರಿಸಲಾದ ಬಾಕಿ ವೇತನ ಬಿಲ್ಲುಗಳನ್ನು ಹಾಗೂ ನಿರ್ದಿಷ್ಟ ಅನುಮೋದನೆ ಪಡೆದಿರುವಂತಹ ಪ್ರಕರಣಗಳನ್ನು ಖಜಾನೆಯಲ್ಲಿ ಅಂಗೀಕರಿಸುವಂತೆ ತಿಳಿಸಿದೆ.

ಉಲ್ಲೇಖ(2) ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಕಾಲೇಜು ಹಾಗೂ ಆಯುಕ್ತಾಲಯದ ಪೂರ್ಣ ಕಾಲಿಕ ಸಿಬ್ಬಂದಿಗಳ 7ನೇ ವೇತನ ಶ್ರೇಣಿಯ 3 ತಿಂಗಳ (ಏಪ್ರಿಲ್ 2020 ರಿಂದ ಜೂನ್-2020ರವೆಗೆ) ಹಿಂಬಾಕಿ ವೇತನವನ್ನು ಪಾವತಿಸಲು ಬಾಕಿ ಇರುವ ರೂ, 873.50 ಲಕ್ಷ ಗಳನ್ನು ಹೆಚ್ಚುವರಿಯಾಗಿ ಒದಗಿಸಿ ಬಿಡುಗಡೆಗೊಳಿಸಿ ಆದೇಶಿಸಿದೆ.

ಮುಂದುವರೆದು, ಉಲ್ಲೇಖ(3) ರಲ್ಲಿ ಈಗಾಗಲೇ ಉಲ್ಲೇಖ(2) ರ ಪತ್ರದಲ್ಲಿ ಪುನರ್ ವಿನಿಯೋಗದ ಮೂಲಕ ಒದಗಿಸಲಾದ ಸದರಿ ಅನುದಾನವನ್ನು ಇಲಾಖೆಯ ಹಿಂದಿನ ಸಾಲುಗಳ ಬಾಕಿ ವೇತನ ಪಾವತಿಗಾಗಿಯು ಸಹ ಬಳಸಿಕೊಳ್ಳಲು ಸೂಚಿಸಿದೆ.

ಅದರಂತೆ, ಉಲೇಖದ ಸರ್ಕಾರದ ಆದೇಶಗಳನ್ವಯ ಬಾಕಿ ಇರುವ ವೇತನ ಬಿಲ್ಲುಗಳನ್ನು ನಿಯಮಾನುಸಾರ ಸಿದ್ಧಪಡಿಸಿ ಸರ್ಕಾರವು ಸೂಚಿಸಿದ ನಿಗಧಿತ ಸಮಯದೊಳಗೆ ಖಜಾನೆಗೆ ಸಲ್ಲಿಸಿ, ಅನುದಾನವನ್ನು ಸೆಳೆಯಲು ಕಾಲ ವಿಳಂಬ ಮನ್ನಾ ಮಾಡಿ ಅನುಮತಿ ನೀಡಿ ಆದೇಶಿಸಿದೆ.

ಷರತ್ತು

1. ಮೇಲ್ಕಂಡ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಒದಗಿಸಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಬಳಸತಕ್ಕದ್ದು.
2. ಬಾಕಿ ಇರುವ ಬಿಲ್ಲುಗಳನ್ನು ಯಾವುದೇ ಕಾಲ ವಿಳಂಬ ಮಾಡದೆ ನಿಯಮಾನುಸಾರ ಇತ್ಯರ್ಥ ಪಡಿಸುವುದು.

29/03/2022

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಅಡಕ: ಉಲ್ಲೇಖದ ಪತ್ರದ ಪ್ರತಿಗಳು.

ಇವರಿಗೆ:1

1. ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಇಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್ ಸಂಸ್ಥೆಗಳ, ಪ್ರಾಂಶುಪಾಲರುಗಳಿಗೆ ( ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ)
2. ನಗದು ವಿಭಾಗ, ಆಯುಕ್ತರವರ ಕಛೇರಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಬೆಂಗಳೂರು ( ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ).
3. ಖಜಾನೆ ಅಧಿಕಾರಿಗಳು, ರಾಜ್ಯ ಹೂಜೂರ್, ಖಜಾನೆ, ಬೆಂಗಳೂರು.
4. ಇ-ಆಡಳಿತ (ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು)

I/220332/2022

**ಕರ್ನಾಟಕ ಸರ್ಕಾರ**

ಸಂ:ಆಇ 01 ಟಿಎಫ್‌ಪಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ:12-02-2022

**ಸುತ್ತೋಲೆ**

**ವಿಷಯ:- ಹಿಂದಿನ ಆರ್ಥಿಕ ವರ್ಷದ / ವರ್ಷಗಳ ವೇತನ ಬಾಕಿಯನ್ನು ಸೆಳೆಯಲು ಆರ್ಥಿಕ ಇಲಾಖೆಯ ಸಹಮತಿ ಪಡೆಯುವ ಬಗ್ಗೆ.**

*********

ಸುತ್ತೋಲೆ ಸಂಖ್ಯೆ: ಆಇ 01 ಟಿಎಫ್‌ಪಿ 2021 ದಿನಾಂಕ:03-08-2021ರಲ್ಲಿ ಎಲ್ಲಾ ಇಲಾಖೆಗಳು, ವೇತನಕ್ಕೆ ಸಂಬಂಧಿಸಿದಂತೆ ಬಾಕಿಗಳನ್ನು ಸೆಳೆಯಬೇಕಾದಲ್ಲಿ ಆರ್ಥಿಕ ಇಲಾಖೆಗೆ ವಿವರಣೆ ಹಾಗೂ ಸೂಕ್ತ ಸಮರ್ಥನೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿ ಆರ್ಥಿಕ ಇಲಾಖೆಯ ನಿರ್ದಿಷ್ಟ ಅನುಮೋದನೆ ಪಡೆದುಕೊಂಡು ಬಾಕಿ ವೇತನಗಳನ್ನು ಸೆಳೆಯತಕ್ಕದೆಂದು, ಇಲ್ಲವಾದಲ್ಲಿ ಖಜಾನೆಯು ಹಿಂದಿನ ವರ್ಷಗಳ ಬಾಕಿ ವೇತನ ಸೆಳೆಯಲು ಅನುವು ಮಾಡತಕ್ಕದ್ದಲ್ಲವೆಂದು ತಿಳಿಸಲಾಗಿದೆ.

ವಿವಿಧ ಇಲಾಖೆಗಳಿಂದ ಬಾಕಿ ವೇತನಗಳಿಗೆ ಸಂಬಂಧಪಟ್ಟ ಪ್ರಸ್ತಾವನೆಗಳನ್ನು ಪರಿಶೀಲಿಸಿ ಆರ್ಥಿಕ ಇಲಾಖೆಯಿಂದ ಹೊರಡಿಸಲಾಗುವ ಪುನರ್ ವಿನಿಯೋಗ ಅಥವಾ ಹೆಚ್ಚುವರಿ ಅನುದಾನಗಳನ್ನು ಹೊರಡಿಸಲಾಗುತ್ತದೆ. ಇಂತಹ **ಆದೇಶಗಳ ಮೇಲೆ ತಯಾರಿಸಲಾದ ಬಾಕಿ ವೇತನ ಬಿಲ್ಲುಗಳನ್ನು ಹಾಗೂ ಆರ್ಥಿಕ ಇಲಾಖೆಯಿಂದ ನಿರ್ದಿಷ್ಟ** ಅನುಮೋದನೆ ಪಡೆದಿರುವಂತಹ ಪ್ರಕರಣಗಳನ್ನು ಖಜಾನೆಯಲ್ಲಿ ಅಂಗೀಕರಿಸುವಂತೆ ತಿಳಿಸಿದೆ.

2021-22ನೇ ಸಾಲಿನಲ್ಲಿ, ವೇತನವನ್ನು ಮುಂದಿನ **ಆರ್ಥಿಕ ಸಾಲಿಗೆ ಮುಂದೂಡದೆ** ಫೆಬ್ರುವರಿ ಮಾಹೆಯ ವೇತನವನ್ನೂ ಸಹ ಈ ವರ್ಷ ಮಾರ್ಚ್ ತಿಂಗಳಲ್ಲಿಯೇ ಸೆಳೆಯಲು ತಿಳಿಸಲಾಗಿದೆ.

12/2/2022
**(ಹೆಚ್.ಎ.ಶೋಭ)**
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ)

ಪ್ರತಿಗಳು:-

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಖಜಾನೆ ಆಯುಕ್ತರು, 6ನೇ ಮಹಡಿ, ಕೆ.ಪಿ.ಸಿ.ಎಲ್., ಗ್ರೀನ್ ಕಟ್ಟಡ, ಔಷಧ ನಿಯಂತ್ರಣ ಆವರಣ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಉನ್ನತ ಶಿಕ್ಷಣ ಇಲಾಖೆಯ ಅಧೀನದ ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹಾಗೂ ಆಯುಕ್ತಾಲಯದ ಪೂರ್ಣ ಕಾಲಿಕ ಸಿಬ್ಬಂದಿಗಳ ವೇತನ ಬಾಕಿ ಪಾವತಿಗಾಗಿ ಹೆಚ್ಚುವರಿ ಅನುದಾನ ಒದಗಿಸುವ ಬಗ್ಗೆ.

389352/22

ಓದಲಾಗಿದೆ:-

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ: ಸಿಟಿಇ 05 ಡಿವಿಪಿ (1) 2021, ದಿನಾಂಕ: 05.03.2022.
2. ಸರ್ಕಾರದ ಆದೇಶ ಸಂಖ್ಯೆ: FD 764 BRS 2021, ದಿನಾಂಕ: 21.03.2022.

ಪ್ರಸ್ತಾವನೆ:-

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 05.03.2022ರ ಪತ್ರದಲ್ಲಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್ , ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹಾಗೂ ಆಯುಕ್ತಾಲಯದ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ಸಿಬ್ಬಂದಿಗಳ 7ನೇ ವೇತನ ಶ್ರೇಣಿಯ 3 ತಿಂಗಳ (ಏಪ್ರಿಲ್ 2020 ರಿಂದ ಜೂನ್ 2020) ಬಾಕಿ ಹಾಗೂ ಹಿಂದಿನ ಸಾಲುಗಳ ಬಾಕಿ ವೇತನ ಭರಿಸಲು ಅವಶ್ಯವಿರುವ ರೂ.873.00ಲಕ್ಷಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ಉಳಿಕೆಯಾಗಿರುವ ರೂ.873.00ಲಕ್ಷಗಳಿಂದ ಮರುಹೊಂದಾಣಿಕೆ ಮೂಲಕ ಒದಗಿಸಲು ಕೋರಿರುತ್ತಾರೆ.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ದಿನಾಂಕ: 21.03.2022ರ ಆದೇಶದಲ್ಲಿ ಆರ್ಥಿಕ ಇಲಾಖೆಯು 2021-22ನೇ ಸಾಲಿಗೆ ಲೆಕ್ಕ ಶೀರ್ಷಿಕೆ: 2203-00-001-0-01-014-ಇತರೆ ಭತ್ಯೆ ಅಡಿಯಲ್ಲಿ ರೂ.50.00ಲಕ್ಷಗಳು, 002-ವೇತನ-ಅಧಿಕಾರಿಗಳು ಅಡಿಯಲ್ಲಿ ರೂ.220.00ಲಕ್ಷಗಳು, ಲೆಕ್ಕ ಶೀರ್ಷಿಕೆ:2203-00-105-0-01-020-ವೈದ್ಯಕೀಯ ಭತ್ಯೆ ಅಡಿಯಲ್ಲಿ ರೂ.7.00ಲಕ್ಷಗಳು, 014-ಇತರೆ ಭತ್ಯೆ ಅಡಿಯಲ್ಲಿ ರೂ.250.00 ಲಕ್ಷಗಳು, 002-ವೇತನ-ಅಧಿಕಾರಿಗಳು ಅಡಿಯಲ್ಲಿ ರೂ.270.00ಲಕ್ಷಗಳು, 2203-00-112-0-02-0-20-ವೈದ್ಯಕೀಯ ಭತ್ಯೆ ಅಡಿಯಲ್ಲಿ ರೂ.1.50ಲಕ್ಷಗಳು, 003-ವೇತನ-ಸಿಬ್ಬಂದಿ ಅಡಿಯಲ್ಲಿ ರೂ.40.00ಲಕ್ಷಗಳು, 014-ಇತರೆ ಭತ್ಯೆ ಅಡಿಯಲ್ಲಿ ರೂ.35.00ಲಕ್ಷಗಳು ಒಟ್ಟು ರೂ.873.50ಲಕ್ಷ (Rupees eight hundred seventy three lakh and fifty thousand only)ಗಳನ್ನು ಪುನರ್ವಿನಿಯೋಗದ ಮೂಲಕ ಒದಗಿಸಲು ಮಂಜೂರಾತಿ ನೀಡಿದೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 46 ಹೆಚ್‌ಪಿಟಿ 2022,**
**ಬೆಂಗಳೂರು, ದಿನಾಂಕ: 22ನೇ ಮಾರ್ಚ್, 2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹಾಗೂ ಆಯುಕ್ತಾಲಯದ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ಸಿಬ್ಬಂದಿಗಳ 7ನೇ ವೇತನ ಶ್ರೇಣಿಯ 3 ತಿಂಗಳ (ಏಪ್ರಿಲ್ 2020 ರಿಂದ ಜೂನ್ 2020ರವರೆಗೆ) ಹಿಂಬಾಕಿ ವೇತವನ್ನು ಪಾವತಿಸಲು ಬಾಕಿ ಇರುವ ರೂ.873.50ಲಕ್ಷಗಳನ್ನು 2021-22ನೇ ಸಾಲಿಗೆ ಲೆಕ್ಕ ಶೀರ್ಷಿಕೆ: 2203-00-001-0-01-014-ಇತರೆ ಭತ್ಯೆ ಅಡಿಯಲ್ಲಿ ರೂ.50.00ಲಕ್ಷಗಳು, 002-

ವೇತನ-ಅಧಿಕಾರಿಗಳು ಅಡಿಯಲ್ಲಿ ರೂ.220.00ಲಕ್ಷಗಳು, ಲೆಕ್ಕ ಶೀರ್ಷಿಕೆ:2203-00-105-0-01-02 ವೈದ್ಯಕೀಯ ಭತ್ಯೆ ಅಡಿಯಲ್ಲಿ ರೂ.7.00ಲಕ್ಷಗಳು, 014-ಇತರೆ ಭತ್ಯೆ ಅಡಿಯಲ್ಲಿ ರೂ.250.00 ಲಕ್ಷಗಳು, 002-ವೇತನ-ಅಧಿಕಾರಿಗಳು ಅಡಿಯಲ್ಲಿ ರೂ.270.00ಲಕ್ಷಗಳು, 2203-00-112-0-02-0-20-ವೈದ್ಯಕೀಯ ಭತ್ಯೆ ಅಡಿಯಲ್ಲಿ ರೂ.1.50ಲಕ್ಷಗಳು, 003-ವೇತನ-ಸಿಬ್ಬಂದಿ ಅಡಿಯಲ್ಲಿ ರೂ.40.00ಲಕ್ಷಗಳು, 014-ಇತರ ಭತ್ಯೆ ಅಡಿಯಲ್ಲಿ ರೂ.35.00ಲಕ್ಷಗಳು ಒಟ್ಟು ರೂ.873.50ಲಕ್ಷ (Rupees eight hundred seventy three lakh and fifty thousand only)ಗಳನ್ನು ಹೆಚ್ಚುವರಿಯಾಗಿ ಒದಗಿಸಿ ಬಿಡುಗಡೆಗೊಳಿಸಿ ಆದೇಶಿಸಿದೆ.

ಷರತ್ತುಗಳು:-

1. ಮೇಲ್ಕಂಡ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಒದಗಿಸಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಬಳಸತಕ್ಕದ್ದು;

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 250 ವೆಚ್ಚ-8/2022, ದಿನಾಂಕ: 22.03.2022ರಲ್ಲಿನ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ,

(ಸಹಿ) 22/03/2022
(ಎಂ.ಜಿ.ವೆಂಕಟೇಶಯ್ಯ)
ಸರ್ಕಾರದ ಉಪ ಕಾರ್ಯದರ್ಶಿ,
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)
ಉನ್ನತ ಶಿಕ್ಷಣ ಇಲಾಖೆ.

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಅಪರ ನಿರ್ದೇಶಕರು, ಟಿಎನ್ಎಂಸಿ, ಖನಿಜಭವನ, ಬೆಂಗಳೂರು.
6. ಜಿಲ್ಲಾ ಖಜಾನಾಧಿಕಾರಿಗಳು, ಬೆಂಗಳೂರು
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ರವರ ಆಪ್ತ ಕಾರ್ಯದರ್ಶಿಗಳು.
8. ಸರ್ಕಾರದ ಕಾರ್ಯದರ್ಶಿ (ವೆಚ್ಚ), ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
9. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಪ್ರತಿ.

/2022

ಸಂಖ್ಯೆ: ಆಇ 250 ವೆಚ್ಚ-8 2022
ಇಡಿ 46 ಹೆಚ್ ಪಿಟಿ 2022

ಆರ್ಥಿಕಇಲಾಖೆ(ವೆಚ್ಚ-8)
ದಿನಾಂಕ: 29-03-2022

ಪ್ರಸ್ತಾವನೆಗೆ ಸಂಬಂಧಿಸಿದಂತೆ ಹಿಂಬರಹ ಸಮ ಸಂಖ್ಯೆ ದಿನಾಂಕ:22.03.2022 ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹಾಗೂ ಆಯುಕ್ತಾಲಯದ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೂರ್ಣಕಾಲಿಕ ಸಿಬ್ಬಂದಿಗಳ 7ನೇ ವೇತನ ಬಾಕಿ ಪಾವತಿಗಾಗಿ ರೂ.873.00 ಲಕ್ಷಗಳ ಅನುದಾನವನ್ನು ಪುನರ್ ವಿನಿಯೋಗದ ಮೂಲಕ ಒದಗಿಸಲಾಗಿತ್ತು, ಸದರಿ ಅನುದಾನವನ್ನು ಇಲಾಖೆಯ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಹಿಂದಿನ ಸಾಲುಗಳ ಬಾಕಿ ವೇತನ ಪಾವತಿಗಾಗಿಯೂ ಸಹ ಬಳಸಿಕೊಳ್ಳಲು ಒದಗಿಸಿದೆ ಎಂದು ಶಿಕ್ಷಣ ಇಲಾಖೆಗೆ ತಿಳಿಸಿದೆ.

[ಸರ್ಕಾರದ ಕಾರ್ಯದರ್ಶಿ(ವೆಚ್ಚ)
ಆರ್ಥಿಕ ಇಲಾಖೆ, ಇವರಿಂದ ಅನುಮೋದಿತ]

Signed by Prajith
Date: 29-03-2022 15:24:56

(ಪ್ರಜೀತ್ ಎಂ ಕೆ ನಂಬಿಯಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ವೆಚ್ಚ-7&8).

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಶಿಕ್ಷಣ ಇಲಾಖೆ(ಉನ್ನತ).